# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಬುಧವಾರ, ೨೪, ಡಿಸೆಂಬರ್, ೨೦೨೫ (ಪುಷ್ಯ, ೦೩, ಶಕವರ್ಷ, ೧೯೪೭)<br>BENGALURU, WEDNESDAY, 24, DECEMBER, 2025 (PUSHYA , 03, SHAKAVARSHA, 1947) | ನಂ. ೮೩೨<br>No. 832 |
|---|---|---|



**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**


ಸಂಖ್ಯೆ: ಕಪಂರಾಸೀನಿಆ/51/ಗ್ರಾ.ಸ್ಥಾ.ನಿ/2023 ದಿನಾಂಕ: 24-12-2025

## ಪ್ರಕಟಣೆ

### ಭಾಗಶಃ ನಗರ ಪ್ರದೇಶಗಳಾಗಿ ಪರಿವರ್ತನೆ ಹೊಂದಿದ ನಂತರ ಪುನರ್ ರಚನೆಗೊಂಡ ಗ್ರಾಮ ಪಂಚಾಯಿತಿಗಳ ಚುನಾವಣಾ ಕ್ಷೇತ್ರ/ವಾರ್ಡ್ ಗಳನ್ನು ನಿಗದಿಪಡಿಸುವ ಕುರಿತು.

ಕೋಲಾರ ಜಿಲ್ಲೆಯ ಕೆಲವು ಗ್ರಾಮೀಣ ಪ್ರದೇಶಗಳು ನಗರ ಸಂಸ್ಥೆಗಳಿಗೆ ಸೇರ್ಪಡೆ ಹೊಂದಿದ ನಂತರ, ಪುನರ್ ರಚನೆಗೊಂಡಿರುವ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರವು ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 5(1) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಚುನಾಯಿತರಾಗಬೇಕಾದ ಒಟ್ಟು ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸಿ ಅಧಿಸೂಚನೆಯನ್ನು ದಿನಾಂಕ:23-06-2025ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-(ಎಫ್) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಪುನರ್ ರಚನೆಗೊಂಡಿರುವ ಗ್ರಾಮ ಪಂಚಾಯಿತಿಗಳಿಗೆ ಚುನಾಯಿಸಲು ಅಗತ್ಯವಾದ ಸದಸ್ಯರ ಸಂಖ್ಯೆಯನ್ನು, ವಾರ್ಡ್ ಗಳು ಅಥವಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಕೋಷ್ಟಕದಲ್ಲಿರುವಂತೆ ನಿಗದಿಪಡಿಸಿದೆ.

ಕೋಷ್ಟಕದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ ಚುನಾಯಿಸಲು ಅಗತ್ಯವಾದ ಸದಸ್ಯರ ಸಂಖ್ಯೆಯನ್ನು, ವಾರ್ಡ್ ಗಳು ಅಥವಾ ಕ್ಷೇತ್ರಗಳನ್ನಾಗಿ ವಿಂಗಡಿಸಿರುವ ಕುರಿತು ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **15 (ಹದಿನೈದು) ದಿವಸಗಳ ಒಳಗಾಗಿ ಅಂದರೆ ದಿನಾಂಕ:07-01-2026ರ ಬುಧವಾರ ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್ ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್ ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ**
**ಕೋಲಾರ ಜಿಲ್ಲೆ**

**ತಾಲ್ಲೂಕಿನ ಹೆಸರು:ಕೋಲಾರ**
**ಗ್ರಾಮ ಪಂಚಾಯಿತಿಯ ಹೆಸರು:ಚೌಡದೇನಹಳ್ಳಿ**

| **ಕ್ರ.ಸಂ** | **ಪ್ರಾದೇಶಿಕ ಚುನಾವಣಾ ಕ್ಷೇತ್ರ/ವಾರ್ಡ್ ನ ಹೆಸರು ಮತ್ತು ಸಂಖ್ಯೆ** | **ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿ** | **ಹಂಚಿಕೆಯಾಗಿರುವ ಸದಸ್ಯ ಸ್ಥಾನಗಳ ಸಂಖ್ಯೆ** |
|---|---|---|---|
| 1 | ಚೌಡದೇನಹಳ್ಳಿ-89 | ಚೌಡದೇನಹಳ್ಳಿ, ಗರುಡಪಾಳ್ಯ | **4** |
| 2 | ಕಲ್ಕೆರೆ-63 | ಕಲ್ಕೆರೆ | **2** |
| 3 | ದೊಡ್ಡವಲ್ಲಭಿ-85 | ದೊಡ್ಡವಲ್ಲಭಿ | **2** |
| 4 | ದಿನ್ನೇಹೊಸಹಳ್ಳಿ-86 | ದಿನ್ನೇಹೊಸಹಳ್ಳಿ | **2** |
| 5 | ಚೊಕ್ಕಪುರ-91 | ಚೊಕ್ಕಪುರ | **1** |
| **ಒಟ್ಟು** | | | **11** |

**ತಾಲ್ಲೂಕಿನ ಹೆಸರು:ಕೋಲಾರ**
**ಗ್ರಾಮ ಪಂಚಾಯಿತಿಯ ಹೆಸರು:ಶೆಟ್ಟಿಹಳ್ಳಿ**

| **ಕ್ರ.ಸಂ** | **ಪ್ರಾದೇಶಿಕ ಚುನಾವಣಾ ಕ್ಷೇತ್ರ/ವಾರ್ಡ್ ನ ಹೆಸರು ಮತ್ತು ಸಂಖ್ಯೆ** | **ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿ** | **ಹಂಚಿಕೆಯಾಗಿರುವ ಸದಸ್ಯ ಸ್ಥಾನಗಳ ಸಂಖ್ಯೆ** |
|---|---|---|---|
| 1 | ಶೆಟ್ಟಿಹಳ್ಳಿ-45 | ಶೆಟ್ಟಿಹಳ್ಳಿ, ಗಿರಿಜನಪೇಟೆ | **3** |
| 2 | ರಾಜಕಲ್ಲಹಳ್ಳಿ-1-34 | ರಾಜಕಲ್ಲಹಳ್ಳಿ-1 | **3** |
| 3 | ರಾಜಕಲ್ಲಹಳ್ಳಿ-2-35 | ರಾಜಕಲ್ಲಹಳ್ಳಿ-2 | **2** |
| 4 | ಧನಮಟ್ನಹಳ್ಳಿ-66 | ಧನಮಟ್ನಹಳ್ಳಿ | **2** |
| 5 | ತೋಕಲಘಟ್ಟ-47 | ತೋಕಲಘಟ್ಟ | **1** |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | |
|---|---|---|---|
| 6 | ಮೇಡಿಹಾಳ-61 | ಮೇಡಿಹಾಳ, ನಂದಿಕಾಮನಹಳ್ಳಿ, ಕೊಂಡೇನಹಳ್ಳಿ(ಬೇ) | **3** |
| 7 | ಅಂದ್ರಹಳ್ಳಿ-84 | ಅಂದ್ರಹಳ್ಳಿ | **1** |
| **ಒಟ್ಟು** | | | **15** |

**(ಡಾ|| ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH